ಪಿಡಬ್ಲ್ಯೂ3 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ದಿಃ **11-07-2023**

<u>ಪಾಟೀ ಸವಾಲು</u> ಃ ಪ್ರತಿವಾದಿ ಪರಃ ಶ್ರೀ ಕೆ ವಿ ಕೆ ವಕೀಲರಿಂದಃ

ನನ್ನ ಮನೆ ಮಿಯಾರು ಗ್ರಾಮದ ಜೋಡುಕಟ್ಟೆಯಲ್ಲಿ ಇದೆ ಎಂದರೆ ಹೌದು. ನಾನು ವಾದಿ ಜಲಜ ಪೂಜಾರ್ತಿ ನನ್ನ ಸಂಬಂಧಿಕರು ಎಂದರೆ ಹೌದು. ಮಜ್ಜು ಪೂಜಾರ್ತಿ ಎಂದರೆ ನನ್ನ ಅಜ್ಜ. ಯಾವ ಕಾರಣಕ್ಕಾಗಿ ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ವಿಲ್ ಮಾಡಿಕೊಟ್ಟಿರುತ್ತಾರೆ ಎನ್ನುವ ವಿಚಾರಕ್ಕಾಗಿ ದಾವೆಯನ್ನು ದಾಖಲಿಸಿರುತ್ತಾರೆ. ಸದರಿ ವಿಲ್ ಗೆ ನನ್ನ ತಂದೆ ಸಹಿ ಮಾಡಿರುತ್ತಾರೆ ಎಂದು ನನಗೆ ಸಮನ್ಸ ಬಂದಿರುತ್ತದೆ. ಸಮನ್ಸ ಬಂದ ನಂತರ ನಾನು ಜಲಜ ಪೂಜಾರ್ತಿಯವರ ಬಳಿ ಈ ಬಗ್ಗೆ ವಿಚಾರಿಸಿರುತ್ತೇನೆ. ಜಲಜ ಪೂಜಾರ್ತಿಯವರು ಹೇಳಿದ ಕಾರಣ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಲಜ ಪೂಜಾರ್ತಿಯವರು ನಿಮ್ಮ ತಂದೆ ವಿಲ್ ಗೆ ಸಹಿ ಹಾಕಿರುತ್ತಾರೆ ಎಂದು ಹೇಳಿದ ಕಾರಣ ನನಗೆ ಗೊತ್ತಾಗಿರುತ್ತದೆ ಎಂದರೆ ನಮ್ಮ ತಂದೆಯು ಸಹ ಒಂದು ವಿಲ್ ಗೆ ಸಹಿ ಹಾಕಿದ ಬಗ್ಗೆ ಹೇಳುತ್ತಿದ್ದರು. 10 ವರ್ಷದ ಹಿಂದೆ ನನ್ನ ತಂದೆ ತೀರಿರುತ್ತಾರೆ. ನನ್ನ ತಂದೆ ಸಹಿಯನ್ನು ಕನ್ನಡದಲ್ಲಿ ಹಾಕರುತ್ತಿದ್ದರು. ನಮ್ಮ ತಂದೆಯ ಸಹಿ ಮಾಡಿರುವ ದಾಖಲೆಗಳು ನಮ್ಮ ಮನೆಯಲ್ಲಿ ಇವೆ. ಅಗತ್ಯ ಬಿದ್ದರೆ ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ನಾನು 10 ನೇ ತರಗತಿವರೆಗೆ ಓದಿರುತ್ತೇನೆ. ನಿಪಿ.16 ರನ್ನು ಸಾಕ್ಷಿಗೆ ತೋರಿಸಿದ್ದು ನಿಪಿ.16 ರಲ್ಲಿ ನನ್ನ ತಂದೆಯವರ ಸಹಿ ಇರುವುದಿಲ್ಲ. ಯಾವ ಇಸವಿಯಲ್ಲಿ ನಿಮ್ಮ ತಂದೆಯವರು ಸಹಿ ಮಾಡಿರುತ್ತೇನೆ ಎಂದು ಹೇಳಿರುತ್ತಾರಾ ಎಂದರೆ ಹೇಳಿರುವುದಿಲ್ಲ. ನನ್ನ ತಂದೆ

ವಿದ್ಯಾಭ್ಯಾಸ ಮಾಡಿರುತ್ತಾರೆ ಆದರೆ ಎಲ್ಲಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ.16 ಕ್ಕೆ ನನ್ನ ತಂದೆಯವರು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮಿಯಾರು ಗ್ರಾಮದಲ್ಲಿ ಕರಿಯ ಪೂಜಾರಿ ಎಂದು ತುಂಬಾ ಜನ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ